

## ಜಗವ ಸುತ್ತುವ ಮಾಯೆ




ಸಾಮಾನ್ಯವಾಗಿ ಪ್ರವಾಸಕಥನವೆಂದರೆ ಒಂದು ಜಾಗ, ಒಂದು ದೇಶ, ಒಂದಿಷ್ಟು ದಿನಗಳ ಪ್ಯಾಕೇಜಿನಲ್ಲಿ ಸುತ್ತಾಡಿದ ಅನುಭವಗಳ ಸುದೀರ್ಘ ಬರಹಗಳಾಗಿರುತ್ತವೆ. ಆದರೆ ಸುಚಿತ್ರಾ ಹೆಗಡೆ ಅವರ ಈ ಕೃತಿ ಕೊಂಚ ಭಿನ್ನ ಸ್ವರೂಪದ್ದು. ಇಲ್ಲಿನ ಬಹುತೇಕ ಬರಹಗಳು ಪತ್ರಿಕೆಗಳಿಗಾಗಿ ಬರೆದವು. ಹಾಗಾಗಿ ಹಲವು ಜಾಗಗಳಲ್ಲಿ ಸುತ್ತಾಡಿದ ಕಿರು ಅನುಭವಕಥನಗಳು ಇಲ್ಲಿವೆ. ವಿದೇಶಗಳ ಬಗ್ಗೆ ಬರೆಯುವಷ್ಟೇ ಉತ್ಸುಕತೆಯಿಂದ ಅವರು ಎಲ್ಲೋರಾ, ವಯನಾಡಿನ ಕುರಿತೂ ಬರೆಯುತ್ತಾರೆ. ಸ್ಥಳಗಳನ್ನು ನೋಡಿ ಬರುವುದಷ್ಟೇ ಪ್ರವಾಸವಲ್ಲ, ಅದನ್ನು ನಮ್ಮ ಭಾವಕೋಶದೊಳಗೆ ಇಳಿಸಿಕೊಳ್ಳಬೇಕು ಎಂಬ ನಿಲುವು ಈ ಎಲ್ಲ ಬರಹಗಳ ಹಿಂದೆ ಇರುವಂತಿದೆ. ಹಾಗಾಗಿಯೇ ಅವರು ಸ್ಥಳಗಳ ಜೊತೆಗೆ ಅಲ್ಲಿನ ಇತಿಹಾಸದಲ್ಲಿ, ಸದ್ಯದ ಸಂಸ್ಕೃತಿಯಲ್ಲಿ, ಅದಕ್ಕೆ ಸಂಬಂಧಿಸಿದ ಕಾವ್ಯದ ನೆನಪಲ್ಲಿ ವಿಹರಿಸುತ್ತಾರೆ. ತಿನಿಸುಗಳೂ ಆಯಾ ಜಾಗವನ್ನು ಅರ್ಥಮಾಡಿಕೊಳ್ಳುವ ಒಂದು ಮೂಲ ಎಂದು ಅವರು ನಂಬಿರುವುದಕ್ಕೆ ಇಲ್ಲಿ ಹಲವು ಪುರಾವೆಗಳು ಸಿಗುತ್ತವೆ. ಕಾಶಿ ನಗರದ ಬಗೆಗಿನ ಲೇಖನದಲ್ಲಿ ಅರ್ಧಕ್ಕಿಂತ ಹೆಚ್ಚು ಭಾಗ ಅಲ್ಲಿ ದೊರೆಯುವ ತಿನಿಸುಗಳ ಬಗ್ಗೆ ಇದೆ. ವಯನಾಡಿನ ವೈನ್ ಬಗ್ಗೆಯೇ ಒಂದು ಲೇಖನವಿದೆ. ಯಾವುದೇ ಜಾಗವಿರಲಿ, ಅಲ್ಲಿ ಸಿಗುವ ಎಲ್ಲ ಅನುಭವಕ್ಕೂ ನಾವು ತೆರೆದುಕೊಂಡಿರಬೇಕು ಎಂಬ ಸುಚಿತ್ರಾ ಅವರ ಮನಸ್ಥಿತಿಯೇ ಅವರ ಬರವಣಿಗೆಯನ್ನು ವಿಶಿಷ್ಟವಾಗಿಸಿದೆ.

**ಲೇ: ಸುಚಿತ್ರಾ ಹೆಗಡೆ; ಬೆ ₹: 110; ಪ್ರ: ಕವಿತಾ ಪ್ರಕಾಶನ; ದೂ: 9880105526**

## ಮನಸು ಬಾವಲಿಯಂತೆ




‘ಹಿಟ್ಲರನ ಮೀಸೆ/ ಎಂಥ ತಮಾಷೆ!/ ಅಷ್ಟು ದೊಡ್ಡ ಬಾಯಿಗೆ/ ಇಷ್ಟು ಚಿಕ್ಕ ಟೂಥ್‌ಬ್ರಷ್ಷೇ?’ – ತುಂಟತನ, ವ್ಯಂಗ್ಯ, ತಮಾಷೆಯ ಮೂಲಕವೇ ಕ್ರೌರ್ಯವನ್ನು ಮೀರುವ ಜಾಣತನ ಎಲ್ಲವೂ ಇರುವ ಈ ‘ವಿಪರ್ಯಾಸ’ ಎಂಬ ಹೆಸರಿನ ಈ ಕಿರುಕವನದ ಮೂಲ ಲೇಖನ ಬರ್ಟೋಲ್ಟ್ ಬ್ರೆಕ್ಟ್. ಕನ್ನಡಕ್ಕೆ ತಂದಿರುವುದು ತುಂಟ ಕವಿ ಬಿ.ಆರ್. ಲಕ್ಷ್ಮಣರಾವ್.

1969ರಿಂದ ಈವರೆಗೆ ಅವರು ಅನುವಾದಿಸಿರುವ ಕವಿತೆಗಳ ಗುಚ್ಛ ‘ಮನಸು ಬಾವಲಿಯಂತೆ’. ಇಂಗ್ಲಿಷ್ ಭಾಷೆಯ ಮೂಲಕ ದಕ್ಕಿದ ಜಗತ್ತಿನ ಬೇರೆ ಬೇರೆ ದೇಶದ ಪ್ರಸಿದ್ಧ ಕವಿಗಳ ಪದ್ಯಗಳಲ್ಲದೆ ಭಾರತದ್ದೇ ತೆಲುಗು, ತಮಿಳು, ಮಲಯಾಳಂ, ಬಂಗಾಳಿ ಹೀಗೆ ಹಲವು ಭಾಷೆಗಳ ಕವಿಗಳ ಪದ್ಯಗಳೂ ಇಲ್ಲಿವೆ. ಇದು ಮೂಲ ಪದ್ಯವನ್ನು ಜೀರ್ಣಿಸಿಕೊಂಡು ಮರುಸೃಷ್ಟಿಸಿದ ಪದ್ಯಗಳು. ಹಾಗಾಗಿ ಇಲ್ಲಿನ ಎಲ್ಲ ಪದ್ಯಗಳಲ್ಲಿಯೂ ಲಕ್ಷ್ಮಣರಾವ್ ‘ಕೈರುಚಿ’ ಸಿಗುತ್ತದೆ. ತಮಾಷೆ, ವಿಷಾದ, ಪ್ರೀತಿ, ಪೋಲಿತನ, ರಾಜಕೀಯ ಎಲ್ಲ ಬಗೆಯ ಪದ್ಯಗಳೂ ಇಲ್ಲಿವೆ. ಮೇಲೆ ಉಲ್ಲೇಖಿಸಿದ ಸಾಲುಗಳನ್ನು ಓದಿ ನಕ್ಕುಬಿಡುವ ನಮ್ಮನ್ನು ಜಗ್ಗಿ ನಿಲ್ಲಿಸುವ ಬ್ರೆಕ್ಟ್‌ನದ್ದೇ ಸಾಲುಗಳು ಇಲ್ಲಿವೆ ನೋಡಿ: ‘ಕೂತಿದ್ದೇನೆ ರಸ್ತೆಯ ಬದಿಯಲ್ಲಿ./ ಚಾಲಕ ಗಾಲಿ ಬದಲಾಯಿಸುತ್ತಿದ್ದಾನೆ./ ನಾ ಬಿಟ್ಟುಬಂದ ಊರು/ನನಗೆ ಇಷ್ಟವಿಲ್ಲ./ ನಾ ಹೋಗುತ್ತಿರುವ ಜಾಗವೂ/ ನನ್ನ ಇಷ್ಟದ್ದಲ್ಲ./ ಆದರೂ ಹೀಗೇಕೆ ನೋಡುತ್ತಿದ್ದೇನೆ ನಾನು/ ಚಾಲಕ ಗಾಲಿ ಬದಲಾಯಿಸುವುದನ್ನು/ ತಾಳ್ಮೆಗೆಟ್ಟು? (ಗಾಲಿಯ ಬದಲಾವಣೆ).

**ಅನುವಾದ: ಬಿ.ಆರ್. ಲಕ್ಷ್ಮಣರಾವ್; ಬೆ: 130; ಪ್ರ: ಧಾತ್ರಿ ಪ್ರಕಾಶನ; ದೂ: 9900580394**